ದಿನಾಂಕಃ 19-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಗೃಹಣಿ ಆಗಿರುತ್ತೇನೆ. ನಾನು ವ್ಯಾಪಾರ ಮಾಡುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನನಗೆ ಆರೋಪಿ ನನ್ನ ಅಳಿಯನ ಮೂಲಕ ಪರಿಚಯ ಆಗಿರುತ್ತಾರೆ. ಆರೋಪಿಯ ವೃತ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಜಮೀನು ಪಡೆದು ಬಡಾವಣೆಯನ್ನು ನಿರ್ಮಿಸಿ ಮಾರಾಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಬೆಂಗಳೂರಿನಲ್ಲಿ ಎಲ್ಲಿ ವಾಸವಾಗಿರುತ್ತಾರೆ ಎಂಬುದು ನನಗೆ ಗೊತ್ತಿರುವುದಿಲ್ಲ. ಆರೋಪಿ ನನಗೆ ಚೆಕ್ಕನ್ನು ಬರೆದು ಕೊಟ್ಟಿರುತ್ತಾರೆ. ನನ್ನ ಗಂಡ ನಿವೃತ್ತಿ ಆಗಿದ್ದು, ನಿವೃತ್ತಿಯಿಂದ ಬಂದ ಹಣವನ್ನು ಮನೆ ನಿರ್ಮಿಸಲು ಮನೆಯಲ್ಲಿ ಇಟ್ಟಿದ್ದು, ಅದನ್ನು ಆರೋಪಿಗೆ ನೀಡಿರುತ್ತೇನೆ. ನನ್ನ ಗಂಡ 4 ವರ್ಷಗಳ ಹಿಂದೆ ನಿವೃತ್ತಿಯಾಗಿರುತ್ತಾರೆ. ನಾನು ಆರೋಪಿಗೆ 15 ಲಕ್ಷ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 15 ಲಕ್ಷ ಹಣವನ್ನು ಸಾಲ ನೀಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

2) ಹಾಸನ ಜಿಲ್ಲೆ, ತೇಜೂರು ಗ್ರಾಮದಲ್ಲಿ ನನ್ನ ಗಂಡನ ಹೆಸರಿನಲ್ಲಿ ಸರ್ವೇ ನಂ. 189/6 ರಲ್ಲಿ 1 ಎಕರೆ ಆಸ್ತಿ ಇತ್ತು ಎಂದರೆ ಸರಿ. ದಿನಾಂಕ 19/12/2023 ರಂದು ಸದರಿ ಆಸ್ತಿಯನ್ನು ಆರೋಪಿಗೆ ಮಾರಾಟ ಮಾಡುತ್ತೇವೆ ಎಂದು ಒಪ್ಪಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಕರಾರು ಪತ್ರದ ಸಮಯದಲ್ಲಿ ನಾವು ಆರೋಪಿಯಿಂದ 5 ಲಕ್ಷ ಹಣವನ್ನು ಚೆಕ್ಕು ಸಂಖ್ಯೆಃ 675946 ಮೂಲಕ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಉಳಿದ 45 ಲಕ್ಷ ಹಣವನ್ನು ನಗದು ರೂಪದ ಮೂಲಕ ಆರೋಪಿಯಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರದಂತೆ ಬಾಕಿ ಉಳಿದ ಹಣಕ್ಕಾಗಿ ಆರೋಪಿಯಿಂದ ಖಾಲಿ ಚೆಕ್ಕು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನಾನು ಈ ಪ್ರಕರಣವನ್ನು ದಾಖಲು ಮಾಡುವ ಮೂಲಕ ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿ ಸದರಿ ಮೇಲ್ಕಂಡ ಆಸ್ತಿಯ ಬಗ್ಗೆ ನೋಂದಾಯಿತ ಕರಾರು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಸಹೋದರಿಯರು ಮಾನ್ಯ ಹೊಳೆನರಸೀಪುರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆರೋಪಿ ಪಕ್ಷಗಾರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ